ಮಾಡುತ್ತದೆ.

ಶ್ರೀ ಆಯನೂರು ಮಂಜುನಾಥ್: ಮಾಹಿತಿಯನ್ನು ಅಧಿಕಾರಿಗಳು ಪೂರ್ತಿಯಾಗಿ ಮಂತ್ರಿಗಳಿಗೆ ಕೊಟ್ಟಿರುವುದಿಲ್ಲ. ಆ ಅಧಿಕಾರಿಗಳಿಗೆ ಗೊತ್ತಿರಬೇಕು, ಈ ತರಹ ಅಗ್ರಿಮೆಂಟ್ ಇದ್ದಾಗ.....

ಅಧ್ಯಕ್ಷರು: ನಾನು ಅವರಿಗೆ ಏನು ಹೇಳಿದೆ ಎಂದರೆ, ಇದು ಸರ್ಕಾರಿ ಸ್ವಾಮ್ಯದಲ್ಲಿ ನಡೆಯತಕ್ಕಂಥ ಸಂಸ್ಥೆ, ಕನಿಷ್ಟ ವೇತನವನ್ನು ನೀವೇ ಜಾರಿಗೆ ತರದೇ ಇರುವುದಕ್ಕೆ ಸಾಧ್ಯವಾಗುವುದಿಲ್ಲ, ದಯಮಾಡಿ ನಿಮ್ಮ ಅಧಿಕಾರಿಗಳ ಜೊತೆಗೆ ಸಂಪರ್ಕ ಮಾಡಿ ಈಗಾಗಲೇ ಕನಿಷ್ಟವೇತನವನ್ನು ಜಾರಿಗೆ ತರದೆಹೋದರೆ ಯಾವ ತಾರೀಖಿನಿಂದ ಅದನ್ನು ಜಾರಿಗೆ ತರಬೇಕು ಎಂದು ಆಲೋಚನೆ ಮಾಡಿ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ನಾನು ಹೇಳಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ: ಈಗಾಗಲೇ ಜಾರಿಗೆ ತಂದಿದ್ದೇವೆ. ಅಷ್ಟೇ ಅಲ್ಲ There is a settlement drawn on 30th July 1997. ಅವರ ಪಾಯಿಂಟ್ ಏನಿದೆ ಎಂದರೆ ನೀವು ಮಿನಿಮಂ ವೇಜಸನ್ನು ಜಾರಿಗೆ ತಂದಿರಿ, ಆದರೆ ನಿಮ್ಮ ನೋಟಿಫೀಕೇಷನ್ ಆದದ್ದು 1995ರಲ್ಲಿ 1995ರಿಂದ ಕೊಡಿ ಎಂದು ತಾವು ಹೇಳುತ್ತಿದ್ದೀರಿ. ಹಾಗಾಗಿ ಹೇಳುತ್ತಿದ್ದೇನೆ. There was an earlier agreement of 1994. According to that agreement, they had said that they will not rise any financial issue. Even then there is a settlement reached. I will examine what the Hon'ble Member has said.

ಶ್ರೀ ಆಯನೂರು ಮಂಜುನಾಥ್: ಇದರೊಳಗೆ ಒಂದೇ ಒಂದು ಅಂಶ ಇದೆ, ಅಗ್ರಿಮೆಂಟ್‌ನೊಳಗೆ ನಾವಾಗಿ ಯಾವುದೇ ಹೊಸ ಫೈನಾನ್ಷಿಯಲ್ ಬೆನಿಫಿಟ್ ಕೇಳುವುದಿಲ್ಲ ಎಂದು ಇದೆ. ಆದರೆ ಅದು ನಾವು ಕೇಳಿದ್ದಲ್ಲ, ಸರ್ಕಾರ ಇಷ್ಟು ಕೊಡಬೇಕು ಎಂದು ಫಿಕ್ಸ್ ಮಾಡಿತ್ತು.

ಅಧ್ಯಕ್ಷರು: ಅವರು ಅದನ್ನು ಹೇಳಿದರಲ್ಲಾ He said that also he will look into it.

ಶ್ರೀ ಆಯನೂರು ಮಂಜುನಾಥ್: ದಯಮಾಡಿ ಒಂದು ವರ್ಷದ್ದು ಇದೆ, ದೊಡ್ಡಮನಸ್ಸು ಮಾಡಿ ಅದನ್ನುಕೊಡಿಸಿ ಸಾಕು.

ವಿಷಯ: ಹುಬ್ಬಳ್ಳಿಯಲ್ಲಿನ ಪ್ರಾಣಿ ಸಂಗ್ರಹಾಲಯವನ್ನು ಮುಚ್ಚಿರುವುದು.

491 (3626)

ಶ್ರೀ ಅಶೋಕ ಕಾಟವೆ, (ಹುಬ್ಬಳ್ಳಿ ನಗರ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹಾನಗರದಲ್ಲಿ ಗಾಜಿನಮನೆಯಲ್ಲಿ ಈ ಕೂಡಲೇ ಇದ್ದ ಪ್ರಾಣಿ ಸಂಗ್ರಹಾಲಯವನ್ನು ಮುಚ್ಚಲು ಕಾರಣವೇನು?

ಆ) ಮತ್ತೆ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಇದ್ದರೆ ಪೂರ್ಣ ವಿವರಗಳನ್ನು ಒದಗಿಸುವುದು.

ಈ) ಇಲ್ಲದಿದ್ದಲ್ಲಿ ಕಾರಣವೇನು

ಶ್ರೀ ಮಿರಾಜುದ್ದೀನ್.ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಸನ್ 1990ನೇ ಸಾಲಿನಲ್ಲಿ ಆರ್ಥಿಕ ಮುಗ್ಗಟ್ಟಿನ ಹಿನ್ನೆಲೆಯಲ್ಲಿ ಅತ್ಯವಶ್ಯಕವಾದ ಕೆಲಸಗಳನ್ನು ನಿರ್ವಹಿಸಲು ಕಷ್ಟವಾಗಿದ್ದರಿಂದ ಮಾನ್ಯ ಆಡಳಿತಾಧಿಕಾರಿಗಳ ತರಾವು ನಂ. 334 ದಿ: 19-4-1990ರನ್ವಯ ಪ್ರಾಣಿಪಕ್ಷಿಗಳನ್ನು ಮೈಸೂರು ಮೃಗಾಲಯ ಹಾಗೂ ತುಂಗಭದ್ರಾ ಡ್ಯಾಮಿನಲ್ಲಿಯ ಚಿಕ್ಕಮಕ್ಕಳ ಪ್ರಾಣಿಸಂಗ್ರಹಾಲಯಕ್ಕೆ ಮತ್ತೆ ವಾಪಸ್ಸು ಕೂಡುವ ಕರಾರುಗಳಿಗೊಳಪಟ್ಟು ಕೊಡಲಾಗಿದೆ. ಅಂದಿನಿಂದ ಪ್ರಾಣಿ ಸಂಗ್ರಹಾಲಯವನ್ನು ಮುಚ್ಚಲಾಯಿತು.

ಆ) ಸದ್ಯಕ್ಕೆ ಪ್ರಾರಂಭಿಸುವ ವಿಚಾರವು ಮಹಾನಗರ ಪಾಲಿಕೆಗೆ ಇರುವುದಿಲ್ಲ.

ಇ) ಉತ್ತರ (ಅ)ದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಈ) ಮಹಾನಗರ ಪಾಲಿಕೆಯು ಆರ್ಥಿಕ ಕೊರತೆಯನ್ನು ಅನುಭವಿಸುತ್ತಿರುವುದರಿಂದ ಮೃಗಾಲಯವನ್ನು ಪ್ರಾರಭಿಸದೇ ಇರುವುದಕ್ಕೆ ಕಾರಣವಾಗಿದೆ.

ಶ್ರೀ ಜಗದೀಶ ಶೆಟ್ಟರ್ (ಅಶೋಕ ಕಾಟ್ವೆ ರವರ ಪರವಾಗಿ): ಹುಬ್ಬಳ್ಳಿ ನಗರದಲ್ಲಿ ಜನರ ವಿಶ್ರಾಂತಿ ಸಲುವಾಗಿ ಇರುವುದೊಂದೇ ಗಾಜಿನ ಮನೆ. ಮತ್ತೆ ರಜದಿನಗಳಲ್ಲಿ ಚಿಕ್ಕ ಮಕ್ಕಳು ಹೋಗಿ ನೋಡಲಿಕ್ಕೆ ಒಂದೇ ಒಂದು ಪ್ರಾಣಿ ಸಂಗ್ರಹಾಲಯ ಇದೆ. ಆ ಪ್ರಾಣಿ ಸಂಗ್ರಹಾಲಯವನ್ನು ಸಹಿತ ಮಹಾನಗರಸಭೆಯವರು ಆರ್ಥಿಕ ಮುಗ್ಗಟ್ಟಿನಿಂದ ಮುಚ್ಚಿದ್ದಾರೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಹಾಗಾದರೆ ಇದಕ್ಕೆ ಪರ್ಯಾಯ ವ್ಯವಸ್ಥೆ ಏನು? ಇದನ್ನು ಮತ್ತೆ ಪುನರ್ ಆರಂಭ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್: ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಗಾಜಿನ ಮನೆ ಹಿಂದೆ ಇದ್ದಂಥ ಆಡಳಿತಾಧಿಕಾರಿ ದಿನಾಂಕ 19-4-90ರಲ್ಲಿ ಫೈನಾನ್ಷಿಯಲ್ ಪೊಸಿಷನ್ ಅಷ್ಟು ಸರಿಯಿಲ್ಲ ಎಂದು ತಿಳಿದು ಬೇರೆ ಡೆವಲಪ್‌ಮೆಂಟ್ಸ್ ಮತ್ತು ಮತ್ತಿತರೆ ಕೆಲಸಗಳನ್ನು ಮಾಡುವುದಕ್ಕೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಅದನ್ನು ತೆಗೆಯಬೇಕೆಂದು ಒಂದು ತರಾವು ಪಾಸು ಮಾಡಿ ಅದನ್ನು ಮುಚ್ಚಿದ್ದಾರೆ. ಅಲ್ಲಿದ್ದಂಥ ಪ್ರಾಣಿಗಳನ್ನು ಮೈಸೂರು ಮೃಗಾಲಯ ಮತ್ತು ತುಂಗಭದ್ರ ಡ್ಯಾಂ ಸೈಟ್ ಏನಿದೆ ಅಲ್ಲಿಗೆ ಕಳುಹಿಸಿದ್ದೇವೆ. ಮತ್ತು ಪುನಃ ನಾವು ಕೇಳಿದಾಗ ಕೊಡಬೇಕು ಎಂಬ ಕಂಡಿಷನ್ ಮೇಲೆ ಕೊಟ್ಟಿದ್ದಾರೆ. ಮತ್ತು ಸಾರ್ವಜನಿಕರಿಂದಾಗಲೀ, ಕಾರ್ಪೋರೇಷನ್‌ನಿಂದಾಗಲೀ ಯಾವುದೇ ಪ್ರಸ್ತಾವನೆ ಸರ್ಕಾರಕ್ಕೆ ಬಂದಿಲ್ಲ. ಅವರಿಂದ ಪ್ರಸ್ತಾವನೆ ಬಂದರೆ ಅದನ್ನು ನಾವು ಕನ್ಸಿಡರ್ ಮಾಡುತ್ತೇವೆ.

ಶ್ರೀ ಜಗದೀಶ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಹಾನಗರಸಭೆಗೆ ಕುಡಿಯುವ ನೀರನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ, ಸರಿಯಾಗಿ ರಸ್ತೆಗಳನ್ನು ನಿರ್ವಹಣೆ ಮಾಡುವುದಕ್ಕೆ ಆಗುತ್ತಾ ಇಲ್ಲ. ಅದನ್ನು ಕೇಳಿದರೆ ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ಹಾಗಾದರೆ ಸರ್ಕಾರದವರಾದರು ಪ್ರಾಣಿ ಸಂಗ್ರಹಾಲಯವನ್ನು ಮತ್ತು ಆ ಗಾಜಿನ ಮನೆಯನ್ನು ತೆಗೆದುಕೊಂಡು ಇವೊತ್ತು ಹುಬ್ಬಳ್ಳಿ ಮಹಾನಗರ ಜನತೆಗೆ ವಿಶ್ರಾಂತಿ ಸಲುವಾಗಿ ಬೇಕಾಗಿರುವಂಥದ್ದನ್ನು ಸರ್ಕಾರ ಮಾಡುವುದಕ್ಕೆ ಸಾಧ್ಯ ಇದೆಯೋ ಹೇಗೆ?

ಅಧ್ಯಕ್ಷರು: ಜಗದೀಶ್‌ರವರೇ, ಅದನ್ನೇ ಹೇಳಿದ್ದು, ನಾಳೆ ನಿಮ್ಮ ಪಕ್ಷ ಅಧಿಕಾರಕ್ಕೆ ಬಂದರೂ ಕೂಡ ನೂರು ರೂಪಾಯಿಯಲ್ಲಿ ಇರವತ್ತೇಳು ರೂಪಾಯಿ ಸಂಬಳಸಾರಿಗೆಗೆ ಹೋಗುತ್ತಾ ಇದೆ. ನೂರರಲ್ಲಿ ಒಂದು ಪರ್ಸೆಂಟ್ ಜನ 67 ರೂಪಾಯಿ ತಿನ್ನುತ್ತಿದ್ದಾರೆ. ಇನ್ನು 99 ಭಾಗದ ಜನರಿಗೆ 33 ಪರ್ಸೆಂಟ್ ಇಟ್ಟುಕೊಂಡಿದ್ದೇವೆ. ಅದರಲ್ಲಿ ಪ್ರಾಣಿ ಸಂಗ್ರಹಾಲಯ, ರಸ್ತೆ, ಬಸ್ಸು ಸ್ಕೂಲು ಅಂದರೆ ಸ್ವಲ್ಪ ಏನಾದರೂ ಯೋಚನೆ ಮಾಡಿ. 4-5 ದಿವಸ ಕಡೆಗೆ ಟೈಂ ಇಟ್ಟುಕೊಳ್ಳುತ್ತೇವಲ್ಲಾ ಒಂದು ಪರ್ಸೆಂಟ್ ಜನ 67 ರೂಪಾಯಿ ತಿನ್ನುತ್ತಿದ್ದಾರಲ್ಲಾ ಅದಕ್ಕೇನಾದರೂ ಲಗಾಮು ಹಾಕುವುದಕ್ಕೆ ಎಲ್ಲರೂ ಸೇರಿ ಸ್ವಲ್ಪ ಯೋಚನೆ ಮಾಡೋಣ. ಯಾರು ಮಂತ್ರಿ ಬಂದರೂ ಅದೇ ಉತ್ತರವೇ. ಅವರೇ ಬರೆದುಕೊಡುವುದು, ಇವರೇ ಹೇಳುವುದು. ದುಡ್ಡೆಲ್ಲಾ ಅವರು ತಿಂದು ಹೋಗುತ್ತಿದ್ದಾರೆ, ಇರೊಬರೋ ದುಡ್ಡೆಲ್ಲಾ ಅವರ ಸಂಬಳಕ್ಕೇ ಸಾಕಾಗಿ ಹೋಗುತ್ತಿದೆ.

12.50 ಪಿ.ಎಂ

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರು ಏನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೋ ಅದು ನಿಜವಾದಂತಹ ಸಂಗತಿಯಾಗಿದೆ. ಇದರ ಬಗ್ಗೆ ಗಂಭೀರವಾದಂತಹ ಚಿಂತನೆ ನಡೆಯಬೇಕಾಗಿದೆ. ಮಹಾನಗರ ಪಾಲಿಕೆ ಜನತೆಗೆ ಅನುಕೂಲವಾಗುವಂತೆ ಈಗ ಸರ್ಕಾರದವರು ಸ್ವಿಮ್ಮಿಂಗ್ ಪೂಲ್ ಅನ್ನು ತಾವೇ

ತೆಗೆದುಕೊಂಡು ನಡೆಸುತ್ತಿದ್ದಾರೆ. ಅಲ್ಲಿ ಇರುವುದು ಒಂದೇ ಪ್ರಾಣಿ ಸಂಗ್ರಹಾಲಯ, ಒಂದೇ ಗಾಜಿನ ಮನೆ. ಅದನ್ನು ತಾವೇ ನಡೆಸಲಿಕ್ಕೆ ಸರ್ಕಾರ ಏನಾದರೂ ಯೋಜನೆಗಳನ್ನು ರೂಪಿಸಿಕೊಳ್ಳುವುದಕ್ಕೆ ವಿಚಾರ ಮಾಡುತ್ತೆದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್: ಮಾನ್ಯ ಅಧ್ಯಕ್ಷರೇ, ಅಲ್ಲಿನ ಕಾರ್ಪೋರೇಷನ್‌ರವರು ಅದನ್ನು ರೀ-ಓಪನ್ ಮಾಡುವ ಬಗ್ಗೆ ಪ್ರಪೋಸಲ್‌ವೊಂದನ್ನು ಸರ್ಕಾರಕ್ಕೆ ಕಳುಹಿಸಿದರೆ ನಾವು ಅದಕ್ಕೆ ಅಪ್ರೂವಲ್ ಕೊಡುತ್ತೇವೆ. ಇದಕ್ಕೆಂದು ಕೊಡಲು ಸರ್ಕಾರದ ಬಳಿ ಬೇರೆ ಯಾವುದೇ ಹಣ ಇಲ್ಲ. ಇದನ್ನು ನೋಡಿಕೊಳ್ಳುವ ಜವಾಬ್ದಾರಿ ಕಾರ್ಪೋರೇಷನ್‌ನವರದ್ದೇ ಆಗಿರುತ್ತದೆ. ಅವರು ಪ್ರಪೋಸಲ್ ಕಳುಹಿಸಿದರೆ ಸರ್ಕಾರ ಅದಕ್ಕೆ ಅಪ್ರೂವಲ್ ಕೊಡುತ್ತದೆ. ಆದರೆ ಅದರ ನಿರ್ವಹಣೆಗೆ ಹಣಕಾಸನ್ನು ಒದಗಿಸುವುದು ಕಾರ್ಪೋರೇಷನ್ ಜವಾಬ್ದಾರಿ.

ವಿಷಯ: ಬಸವಕಲ್ಯಾಣದಲ್ಲಿ ಕೈಗಾರಿಕೆಗಳು

492 (3203)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಕೇಂದ್ರ ಸರ್ಕಾರದವರು ಹಾಗೂ ಇತರ ಭಾರಿ ಕೈಗಾರಿಕೋದ್ಯಮಿಗಳು ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲು ಕೈಗೊಂಡ ಕ್ರಮಗಳೇನು?

ಆ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ಸ್ವಾಮ್ಯದ ಕೈಗಾರಿಕೆಗಳನ್ನು ಇಲ್ಲಿ ಪ್ರಾರಂಭಿಸಲು ಮಾಡಿದ ಕಾರ್ಯಕ್ರಮಗಳೇನು (ವಿವರಗಳನ್ನು ಒದಗಿಸುವುದು)

ಶ್ರೀ ಆರ್.ವಿ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು):

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಬೀದರ್ ಜಿಲ್ಲೆಯ ತ್ರಿಪುರಾಂತ ಬಸವಕಲ್ಯಾಣ ಕೈಗಾರಿಕಾ ಪ್ರದೇಶದಲ್ಲಿ 96-10 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಈ ಜಮೀನಿನಲ್ಲಿ ಸುಮಾರು 30-00 ಎಕರೆ ಜಮೀನನ್ನು ಬಸವಕಲ್ಯಾಣ ಆಟೋ ಗ್ಯಾರೇಜ್ ಅಸೋಸಿಯೇಷನ್ ಇವರಿಗೆ ಆಟೋ